# ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿ (ಯು.ಡಿ.ಐ.ಡಿ.)

(www.swavlambancard.gov.in)

**ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.**

# ಹಿನ್ನೆಲೆ







- ವಿಕಲಚೇತನ ವ್ಯಕ್ತಿ ಎಂದರೆ ಶೇ.40%ರಷ್ಟು ಮತ್ತು ಅದಕ್ಕಿಂತ ಹೆಚ್ಚು ಅಂಗವೈಕಲ್ಯತೆ ಹೊಂದಿರುವವರು ಎಂದರ್ಥ.



- ಜನಗಣತಿ 2011ರ ಪ್ರಕಾರ, ಭಾರತದಲ್ಲಿ 2.68 ಕೋಟಿ ವಿಕಲಚೇತನ ವ್ಯಕ್ತಿಗಳು ಇರುತ್ತಾರೆ(ಒಟ್ಟು ಜನಸಂಖ್ಯೆಯಲ್ಲಿ 2.21 ಪ್ರತಿಶತ)



- ದೇಶದಾದ್ಯಂತ ಹಾಲಿ ವಿಕಲಚೇತನ ವ್ಯಕ್ತಿಗಳ ವೈಯಕ್ತಿಕ, ಅಂಗವಿಕಲತೆಯ, ಜಿಲ್ಲಾವಾರು, ಶಿಕ್ಷಣ ಹಾಗೂ ಉದ್ಯೋಗ ಮುಂತಾದ ಪರಿಷ್ಕೃತ ವಿವರಗಳು ಲಭ್ಯವಿರುವುದಿಲ್ಲ.





- ಮುಂದಿನ ದಿನಗಳಲ್ಲಿ ಎಲ್ಲಾ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿಯು ಆಧಾರವಾಗಿರುತ್ತದೆ. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಇಲ್ಲಿಯವರೆಗೆ ಕೇವಲ ಶೇ.75%ರಷ್ಟು ವಿಕಲಚೇತನರಿಗೆ ಅಂಗವಿಕಲರ ಗುರುತಿನ ಚೀಟಿಯನ್ನು ನೀಡಲಾಗಿದೆ.

- ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016, ಜಾರಿಗೆ ಬಂದ ನಂತರ ಅಂಗವಿಕಲತೆಯ ವಿಧಗಳನ್ನು 7 ರಿಂದ 21ಕ್ಕೆ ಹೆಚ್ಚಿಸಲಾಗಿದೆ.

# ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಪ್ರಕರ ಅಂಗವಿಕಲತೆಯ ವಿಧಗಳು

## 21 ವಿವಿಧ ಬಗೆಯ ಅಂಗವಿಕಲತೆಗಳು

1. ದೃಷ್ಟಿ ದೋಷ
2. ಮಂದದೃಷ್ಟಿ
3. ಕುಷ್ಠರೋಗದಿಂದ ಗುಣವಾಗಿರುವವರು
4. ಶ್ರವಣ ದೋಷ
5. ದೈಹಿಕ ಅಂಗವಿಕಲತೆ
6. ಕುಬ್ಜತೆ
7. ಬೌದ್ಧಿಕ ವಿಕಲತೆ
8. ಮಾನಸಿಕ ಅಸ್ವಸ್ಥತೆ
9. ಆಟಿಸಂ ಸ್ಪೆಕ್ಟ್ರಂ ಡಿಸಾರ್ಡರ್
10. ಮೆದುಳು ವಾತ
11. ಮಸ್ಕ್ಯುಲರ್ ಡಿಸ್‌ಟ್ರೋಫಿ
12. ಕ್ರೋನಿಕ್ ನ್ಯೂರೂಲೊಜಿಕಲ್ ಕಂಡಿಷನ್
13. ನಿರ್ದಿಷ್ಟ ಕಲಿಕಾ ನ್ಯೂನ್ಯತೆ
14. ಮಲ್ಟಿಪಲ್ ಸ್ಕ್ಲೀರೋಸಿಸ್
15. ಮಾತು ಮತ್ತು ಭಾಷೆಯ ವಿಕಲತೆ
16. ತ್ಯಾಲೆಸೀಮಿಯ
17. ಹೀಮೊಫಿಲಿಯ
18. ಸಿಕಲ್ ಸೆಲ್ ಅನೀಮಿಯ
19. ಬಹುವಿಧ ಅಂಗವಿಕಲತೆ (ಅಂಧತ್ವ ಹಾಗೂ ಕಿವುಡು ಒಳಗೊಂಡ)
20. ಆಸಿಡ್ ದಾಳಿಗೆ ತುತ್ತಾದವರು
21. ಪಾರ್ಕಿನ್ಸನ್ ಕಾಯಿಲೆ

# ಯು.ಡಿ.ಐ.ಡಿ. ಯೋಜನೆಯ ಗುರಿ

- ವೆಬ್ ಪೋರ್ಟಲ್ ಮೂಲಕ ಪ್ರತಿಯೊಬ್ಬ ವಿಕಲಚೇತನ ವ್ಯಕ್ತಿಗೆ ವಿಶಿಷ್ಠ ಗುರುತಿನ ಚೀಟಿಯನ್ನು ನೀಡುವುದು ಹಾಗೂ ಈ ವ್ಯಕ್ತಿಗಳನ್ನು ಗುರುತಿಸಿ ರಾಷ್ಟ್ರೀಯ Databaseನ್ನು ನಿರ್ಮಿಸುವುದು.

- ಯುಡಿಐಡಿ ಕಾರ್ಡ್‌ಗಳನ್ನು ಈ ಕೆಳಕಂಡವರಿಗೆ ವಿತರಿಸಲಾಗುವುದು:
  ಅ) ಹಾಲಿ ಗುರುತಿನ ಚೀಟಿ ಹೊಂದಿರುವವರು, ಆದರೆ ಹಾಲಿ ಗುರುತಿನ ಚೀಟಿಯನ್ನು ಇವರು ವಿಕಲಚೇತನರ ವಿಶಿಷ್ಠ ಗುರುತಿನ ಚೀಟಿಯನ್ನಾಗಿ ಬದಲಾಯಿಸಿಕೊಳ್ಳವುದು.
  ಆ) ಅಂಗವಿಕಲರ ಗುರುತಿನ ಚೀಟಿ ಹೊಂದಿಲ್ಲದ ವಿಕಲಚೇತನರು.
  ಇ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಪ್ರಕಾರ ಹೊಸ 14 ವಿವಿಧ ಸ್ವರೂಪದ ಅಂಗವೈಕಲ್ಯತೆಯಡಿ ಗುರುತಿಸಲಾದ ವಿಕಲಚೇತನರು.

- ವಿಕಲಚೇತನರಿಗೆ ವಿದ್ಯಾರ್ಥಿ ವೇತನ, ಕೌಶಲ್ಯ ತರಬೇತಿ, ಸಮನ್ವಯ ಶಿಕ್ಷಣ, ಪುನರ್ವಸತಿ ಯೋಜನೆ, ಪಿಂಚಣಿ, ರೈಲ್ವೆ ರಿಯಾಯಿತಿ ಮುಂತಾದ ಸರ್ಕಾರಿ ಯೋಜನೆಗಳನ್ನು ಒದಗಿಸುವಾಗ ಪಾರದರ್ಶಕತೆಯನ್ನು ಪ್ರೋತ್ಸಾಹಿಸುವುದು.

- ಎಲ್ಲಾ ಹಂತಗಳಲ್ಲಿ ವಿಕಲಚೇತನರಿಗೆ ಒದಗಿಸಲಾಗುವ ಸೌಲಭ್ಯಗಳ ಅರ್ಥಿಕ ಹಾಗೂ ಭೌತಿಕ ಪ್ರಗತಿಯನ್ನು ಗುರುತಿಸುವುದು.

- ವಿಕಲಚೇತನರು ಉದ್ಯೋಗ ಹಾಗೂ ಇತರೆ ಸೌಲಭ್ಯಗಳನ್ನು ಪಡೆಯಲು ಸಲ್ಲಿಸುವ ಅರ್ಜಿಗಳನ್ನು ಪರಿಶೀಲಿಸಿ, ಅವರು ನೀಡಿರುವ ಮಾಹಿತಿ ಸರಿಯಿದೆ ಎಂದು ಖಾತ್ರಿ ಪಡೆದುಕೊಳ್ಳುವುದು.

# ಯೋಜನೆಯ ವಿವರಗಳು

- ದೇಶದಾದ್ಯಂತ ವಿಕಲಚೇತನ ವ್ಯಕ್ತಿಗಳ ವಿವರಗಳನ್ನು ಆನ್‌ಲೈನ್ ಮೂಲಕ ಲಭ್ಯಗೊಳಿಸುವುದು.
- ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿಯನ್ನು ಪಡೆಯಲು ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳುವುದು.
- ಆಸ್ಪತ್ರೆ /ವೈದ್ಯಕೀಯ ಪ್ರಾಧಿಕಾರಗಳಿಂದ ಅಂಗವಿಕಲತೆಯ ಶೇಕಡವಾರು ಪ್ರಮಾಣವನ್ನು ಶೀಘ್ರವಾಗಿ ಪತ್ತೆಹಚ್ಚಲು ಸೂಕ್ತ ಕ್ರಮವಹಿಸುವುದು.
- ವಿಕಲಚೇತನರ ಮಾಹಿತಿಯನ್ನು ನಕಲು ಮಾಡಲು ಸಾಧ್ಯವಾಗದಿರುವುದು.
- ವಿಕಲಚೇತನರು ಅಥವಾ ಅವರ ಪರವಾಗಿ ವಿಕಲಚೇತನರ ವಿವರಗಳನ್ನು ಆನ್‌ಲೈನ್ ಮೂಲಕ ನವೀಕರಿಸುವುದು/ಅಪ್‌ಡೇಟ್‌ಗೊಳಿಸುವುದು.
- MIS ವರದಿಯ ರೂಪುರೇಷೆಗಳು.
- ವಿಕಲಚೇತನರಿಗೆ ನೀಡಲಾಗುತ್ತಿರುವ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಅಗತ್ಯ ಕ್ರಮವಹಿಸುವುದು.
- ಮುಂದೆ ಬರಬಹುದಾದ ಹೊಸ ಅಂಗವಿಕಲತೆಯ ನಿರ್ವಹಣೆ.

# ಯು.ಡಿ.ಐ.ಡಿ. ಯೋಜನೆಯಡಿ ಸೆರೆಹಿಡಿಯ ಬೇಕಾದ ಮಾಹಿತಿ

## ವೈಯಕ್ತಿಕ ವಿವರಗಳು

- ಅರ್ಜಿದಾರರ ಮೊದಲ ಹೆಸರು, ಅರ್ಜಿದಾರರ ಮಧ್ಯದ ಹೆಸರು, ಅರ್ಜಿದಾರರ ಉಪನಾಮ
- ಇ–ಮೇಲ್ ವಿವರ
- ಮೊಬೈಲ್ ಸಂಖ್ಯೆ
- ಹುಟ್ಟಿದ ದಿನಾಂಕ
- ವಯಸ್ಸು

## ಅಂಗವಿಕಲತೆಯ ವಿವರಗಳು

- ಅಂಗವಿಕಲತೆಯ ಶೇಕಡವಾರು ಪ್ರಮಾಣ
- ಅಂಗವಿಕಲತೆಯ ವಿಧ
- ಅಂಗವಿಕಲ ಗುರುತಿನ ಚೀಟಿಯ ವಿವರ

# ಯು.ಡಿ.ಐ.ಡಿ. ಯೋಜನೆಯಡಿ ಸೆರೆಹಿಡಿಯಲಾದ ಮಾಹಿತಿ

- ಶೈಕ್ಷಣಿಕ ವಿವರಗಳು
  - ಶಿಕ್ಷಣದ ವಿವರ
- ಉದ್ಯೋಗದ ವಿವರಗಳು
  - ಉದ್ಯೋಗಸ್ಥರು/ನಿರುದ್ಯೋಗಿ
  - ಉದ್ಯೋಗದಲ್ಲಿ ಇದ್ದರೆ, ಉದ್ಯೋಗದ ವಿವರ ಮತ್ತು ವಾರ್ಷಿಕ ಆದಾಯವನ್ನು ನಮೂದಿಸಬೇಕು
- ಗುರುತಿನ ವಿವರಗಳು
  - ಆಧಾರ್ ಕಾರ್ಡ್/ಡ್ರೈವಿಂಗ್ ಲೈಸೆನ್ಸ್/ ಪ್ಯಾನ್ ಕಾರ್ಡ್/ರೇಷನ್ ಕಾರ್ಡ್/ವೋಟರ್ ಐಡಿ ವಿವರ

# ಯುಡಿಐಡಿ ಜಾಲತಾಣದ ಮುಖಪುಟ



# ಯುಡಿಐಡಿ ಕಾರ್ಡ್ ಮುಂಭಾಗ




ಪ್ರಾದೇಶಿಕ ಭಾಷೆಯಲ್ಲಿ ಹೆಸರು

ಆಂಗ್ಲ ಭಾಷೆಯಲ್ಲಿ ಹೆಸರು

18 ಅಂಕಿಯ ಯುಡಿಐಡಿ ಸಂಖ್ಯೆ

ಅಂಗವಿಕಲತೆಯ ವಿಧ

ಹುಟ್ಟಿದ ವರ್ಷ

ವಿತರಣಾ ದಿನಾಂಕ

ಗರಿಷ್ಠ ಅವಧಿ

ಅಂಗವೈಕಲ್ಯತೆಯ ಶೇಕಡಾವಾರು ಪ್ರಮಾಣ

ರಾಜ್ಯದ ಲೋಗೋ

ಭಾವಚಿತ್ರ

ಮುಖ್ಯ ವೈದ್ಯಾಧಿಕಾರಿಗಳ ಸಹಿ

# ಯುಡಿಐಡಿ ಕಾರ್ಡ್ ಹಿಂಭಾಗ



UNIQUE DISABILITY ID
Government of India
STATE ID:
N/A
Aadhaar No.
********8233
Address of the Card Issuing Authority State/District level
Cmo Office, Nr. Shiv Temple, Mysore, Karnataka - 852369
QRಕೋಡ್
ಆಧಾರ್ ಸಂಖ್ಯೆ
ಮುಖ್ಯ ವೈದ್ಯಾಧಿಕಾರಿಗಳ ವಿಳಾಸ

# ಧನ್ಯವಾದಗಳು